ಏಕಾಗ್ರತೆಯೇ ಸಿದ್ಧಿಸುತ್ತಿಲ್ಲ" ಎಂದಾಗ, "ಯಾವುದರಿಂದ ಅದು ವಿಚಲಿತವಾಗುವುದು?" ಎಂದು ಕೇಳಿದರು. "ನನ್ನ ಅಣ್ಣನ ಮಗು ನನಗೆ ಪ್ರಾಣಕ್ಕಿಂತ ಪ್ರಿಯ. ಅದೇ ನನಗೆ ಅಡ್ಡಿಯಾಗುತ್ತಿದೆ ಏಕಾಗ್ರತೆಗೆ" ಎಂದಾಗ, "ಆ ಮಗುವನ್ನೇ ನೀನು 'ಕೃಷ್ಣ'ನೆಂದು ಭಾವಿಸು" ಎನ್ನುತ್ತಾರೆ ಶ್ರೀರಾಮಕೃಷ್ಣರು.

ಹರಿಗೆ ಸ್ತ್ರೀಯರನ್ನು ಕಂಡರೆ ದ್ವೇಷ; ಒಂದು ಹೆಣ್ಣುಮಗು ಅಂಬೆಗಾಲಿಡುತ್ತ ಬಂದರೂ ಅದನ್ನು ಅವನು ಸಹಿಸುತ್ತಿರಲಿಲ್ಲ. ಶ್ರೀರಾಮಕೃಷ್ಣರು ಅವನಿಗೆ ಹೇಳುತ್ತಾರೆ, "ನೀನು ಸ್ತ್ರೀಯನ್ನು ದ್ವೇಷಿಸಬೇಡ; ದ್ವೇಷಿಸಿದಷ್ಟೂ ಬಲೆಗೆ ಬೀಳುತ್ತೀಯೆ; ಎಲ್ಲಾ ಸ್ತ್ರೀಯರೂ ಜಗನ್ಮಾತೆಯ ರೂಪವೆಂದು ನೋಡು" ಎಂದರು.

ಆಧ್ಯಾತ್ಮಿಕ ಜೀವನದಲ್ಲಿ ನಾವು ಮಾಡಿದ ಸಾಧನೆ ಯಾವುದೂ ವ್ಯರ್ಥವಾಗುವುದಿಲ್ಲ: ತಕ್ಷಣವೇ ಆ ಪ್ರತಿಫಲ ಗೊತ್ತಾಗದೇ ಇರಬಹುದು. ಆದರೆ ಅದು ನಮ್ಮನ್ನು ರಕ್ಷಿಸುವ ಶಕ್ತಿಯಾಗಿ ಕಾದುಕೊಂಡಿರುತ್ತದೆ. ಇದಕ್ಕೆ ಒಂದು ನಿದರ್ಶನವನ್ನು ಶ್ರೀರಾಮಕೃಷ್ಣರು ಕೊಡುತ್ತಾರೆ: ಶಾಕ್ತ ಸಂಪ್ರದಾಯದ ಒಬ್ಬ ಭಕ್ತ ಶ್ಮಶಾನದಲ್ಲಿ ಶವದ ಮೇಲೆ ಕುಳಿತುಕೊಂಡು ಸಾಧನೆ ಮಾಡುತ್ತಿದ್ದ. ಪ್ರಯಾಣಿಕನೊಬ್ಬ ಆ ದಾರಿಯಲ್ಲಿ ಹೋಗುತ್ತಿದ್ದ. ಅಷ್ಟರಲ್ಲೇ ಅಲ್ಲಿಗೆ ಒಂದು ಹುಲಿ ಬಂತು. ಅದರಿಂದ ಪಾರಾಗಲು ಪ್ರಯಾಣಿಕ ಒಂದು ಮರ ಹತ್ತಿ ಕುಳಿತ. ಹುಲಿ ಶವದ ಮೇಲೆ ಕುಳಿತು ಸಾಧನೆ ಮಾಡುತ್ತಿದ್ದವನನ್ನು ಕೊಂದು ಹೋಯಿತು. ಅದು ಹೋದ ಮೇಲೆ ಪ್ರಯಾಣಿಕ ಮರದಿಂದ ಕೆಳಗಿಳಿದು ನೋಡಿದ. ದೇವಿ ಪೂಜೆಗೆ ಎಲ್ಲಾ ಸಾಮಗ್ರಿ ಅಣಿಯಾಗಿದೆ, ಪೂಜೆ ಮಾಡಿ ಹೋಗೋಣ ಎಂದು ಕುಳಿತು ಸ್ವಲ್ಪ ಧ್ಯಾನ ಮಾಡಿದುದೇ ತಡ, ದೇವಿ ಪ್ರತ್ಯಕ್ಷಳಾಗಿ "ನಿನಗೇನು ಬೇಕು?" ಎಂದು ಕೇಳಿದಳು. ಇವನಿಗೆ ಆಶ್ಚರ್ಯವಾಯಿತು. "ತಾಯಿ! ನೀನು ಕೃಪೆ ಮಾಡುವ ರೀತಿಯನ್ನು ನಾನು ತಿಳಿದುಕೊಳ್ಳಲಾರೆ. ನನ್ನ ಎದುರಿಗೇ ಯಾರೋ ಭಕ್ತ ನಿನ್ನನ್ನು ಒಲಿಸಿಕೊಳ್ಳಬೇಕೆಂದು ಎಷ್ಟೊಂದು ತೊಂದರೆ ತೆಗೆದುಕೊಂಡ. ಆದರೆ ಅವನನ್ನು ಹುಲಿ ನುಂಗಿಹೋಯಿತು. ನಾನು ಈಗತಾನೆ ಕುಳಿತರೆ ಕೂಡಲೇ ಪ್ರತ್ಯಕ್ಷವಾದೆಯಲ್ಲಾ? ಇದರ ರಹಸ್ಯವೇನು?" ಎಂದು ಪ್ರಶ್ನಿಸಿದ. ಅದಕ್ಕೆ ತಾಯಿ ಹೇಳಿದಳು, "ನೀನು ಹಿಂದೆ ಬೇಕಾದಷ್ಟು ಸಾಧನೆ ಮಾಡಿದ್ದೆ. ಇನ್ನು ಸ್ವಲ್ಪ ಎಲ್ಲೋ ಉಳಿದಿತ್ತು. ಈಗ ಅದು ಪೂರ್ಣವಾಯಿತು, ಅದಕ್ಕಾಗಿ ಬಂದೆ."

ನಮಗೆ ಆಧ್ಯಾತ್ಮಿಕ ಜೀವನದಲ್ಲಿ ಯಾವಾಗಲೂ ಒಂದು ಭರವಸೆ ಇರಬೇಕು. "ನಾನು ಗೆಲ್ಲುತ್ತೇನೆ, ಗುರಿ ಮುಟ್ಟುತ್ತೇನೆ; ಭಗವಂತನಲ್ಲಿ ಸಂಪೂರ್ಣ ಶರಣಾಗತನಾಗಿರುವುದರಿಂದ ಅವನು ನನ್ನನ್ನು ನಡುನೀರಿನಲ್ಲಿ ಕೈಬಿಡುವುದಿಲ್ಲ" ಎಂಬ ದೃಢ ನಂಬಿಕೆಯ 'ಧ್ರುವತಾರೆ' ಸದಾ ಮಿನುಗುತ್ತಿರಬೇಕು. ಸಾಧಕನ ಮುಂದೆ ಇಂತಹ ನಂಬಿಕೆ, ಶ್ರದ್ಧೆಗಳು ಇದ್ದರೆ, ಅವನು ಆಗ ಎಂತಹ ಸಮಸ್ಯೆಯನ್ನಾದರೂ ಬಿಡಿಸಿಕೊಳ್ಳಬಲ್ಲ; ಎಂತಹ ಆತಂಕವನ್ನಾದರೂ ಎದುರಿಸಬಲ್ಲ. ಇದನ್ನು ವಿವರಿಸಲು ಶ್ರೀರಾಮಕೃಷ್ಣರು ಒಂದು ಕಥೆ ಹೇಳುತ್ತಿದ್ದರು: ಒಂದು ಪಕ್ಷಿ ಸಮುದ್ರದ ತೀರದಲ್ಲಿ ಒಂದು ಮರದ ಮೇಲೆ ವಾಸಮಾಡಿಕೊಂಡಿತ್ತು. ಅದು ಸಮುದ್ರದ ಉಬ್ಬರವಿಳಿತಗಳಿಗೆ ಆಗಾಗ್ಗೆ ಒಳಪಡುತ್ತಿತ್ತು, ಪ್ರತಿ ಸಲ ಅದು ಮೊಟ್ಟೆಯಿಟ್ಟಾಗಲೂ, ಸಮುದ್ರ ಉಬ್ಬಿ ಬಂದು ಅದರ ಮೊಟ್ಟೆಗಳನ್ನು ಕೊಚ್ಚಿಕೊಂಡು ಹೋಗಿಬಿಡುತ್ತಿತ್ತು. ಆ ಪಕ್ಷಿಗೆ ಒಂದು ಸಲ ತುಂಬಾ ಕೋಪ ಬಂದು, "ಈ ಸಮುದ್ರ ಇರುವುದರಿಂದಲೇ ಅಲ್ಲವೆ ನನಗೆ ಈ ತೊಂದರೆ; ಇದನ್ನು ಬೇರೆ ಕಡೆ ರವಾನಿಸಿದರೆ ಆಗ ನನ್ನ ಮೊಟ್ಟೆಗಳು ಸುರಕ್ಷಿತವಾಗಿರುವುವು" ಎಂದು ತನ್ನ ಪುಟ್ಟ ಕೊಕ್ಕಿನಿಂದ ಸಮುದ್ರದ ನೀರನ್ನು ಸ್ವಲ್ಪ ಸ್ವಲ್ಪವಾಗಿ ಕುಡಿದು ಅದನ್ನು ಬೇರೆ ಕಡೆ ಹಾರಿಹೋಗಿ ಉಗುಳುತ್ತಿತ್ತು. ಹಕ್ಕಿಯ ಈ ಕೆಲಸವನ್ನು ಒಂದು ದಿನ ನಾರದರು ನೋಡಿದರು. "ಏನು ಮಾಡುತ್ತಿರುವೆ, ಹಕ್ಕಿ?" ಎಂದು ಕೇಳಿದರು. "ಈ ಸಮುದ್ರವನ್ನು ಬೇರೆ ಕಡೆ ಸಾಗಿಸುತ್ತಿರುವೆ" ಎಂದಿತು ಹಕ್ಕಿ. "ಇದು ಯಾವ ಯುಗಕ್ಕೆ ಆದೀತು?" ಎಂದು ಕೇಳಿದರು ನಾರದರು. "ಎಷ್ಟಾದರೂ ಯುಗಗಳಾಗಲಿ, ನಾನು ಆತ್ಮ, ಅನಂತ; ಈ ಸಮುದ್ರ ಇಷ್ಟು ದೊಡ್ಡದಾಗಿದ್ದರೂ ಸಾಂತ; ಒಂದಲ್ಲ ಒಂದು ಸಲ ನಾನು ಈ ಪ್ರಯತ್ನದಲ್ಲಿ ಜಯಶೀಲನಾಗಿಯೇ ತೀರುತ್ತೇನೆ" ಎಂದು ಹೇಳಿತು ಹಕ್ಕಿ. ನಾರದರಿಗೆ ಈ ಮಾತನ್ನು ಕೇಳಿ, ಹಕ್ಕಿಯ ಶ್ರದ್ಧೆ, ವಿಶ್ವಾಸ, ನಂಬಿಕೆ ಭರವಸೆಗಳನ್ನು ನೋಡಿ ಸಂತೋಷವಾಯಿತು. ಅವರು ವರುಣದೇವನನ್ನು ಕರೆಸಿ ಆ ಪಕ್ಷಿಯ ಮೊಟ್ಟೆಗಳನ್ನು ಹಿಂತಿರುಗಿ ಕೊಡಿಸಿದರು.

"ಹಿಂದಿನಿಂದ ಬಂದ ಸಂಸ್ಕಾರಗಳ ಮೊತ್ತವನ್ನು ನಾನು ಇಂದೇ ಜಯಿಸಲು ಸಾಧ್ಯವಿಲ್ಲದಿರಬಹುದು. ಆದರೆ ಇದಕ್ಕಾಗಿ ನಾನು ಹೋರಾಡುತ್ತೇನೆ: ಎಷ್ಟು ಜನ್ಮಗಳಾದರೂ ಬಿಡುವುದಿಲ್ಲ" ಎಂಬ ಛಲವಿರಬೇಕು. ಈ ಪುರುಷ ಪ್ರಯತ್ನವಿದ್ದರೆ, ಭಗವಂತನ ಕೈ ನಮಗೆ ಸಹಾಯ ಮಾಡುವುದಕ್ಕೆ ಸದಾ ಸಿದ್ಧವಿದೆ. ಶ್ರೀರಾಮಕೃಷ್ಣರು, ಆಧ್ಯಾತ್ಮಿಕ ಜೀವನದಲ್ಲಿ ನಾವು ಗುರಿ ಸೇರಬೇಕಾದರೆ, ಭಗವಂತನಲ್ಲಿ ಶರಣಾಗತಿ ಮತ್ತು ಸ್ವಪ್ರಯತ್ನ ಎರಡೂ ಸಂಗಮವಾಗಬೇಕು. ಭಗವಂತನ ಕೃಪೆ ಎಂಬ ತಂಗಾಳಿ ಯಾವಾಗಲೂ ಬೀಸುತ್ತಿದೆ; ಆದರೆ ನಾವು ಸ್ವಪ್ರಯತ್ನದ ಧ್ವಜವನ್ನು ಹರಡಿದರೆ ಮಾತ್ರ ನಮಗೆ ಅದರಿಂದ ಭವಸಾಗರವನ್ನು ದಾಟಲು ಪ್ರಯೋಜನ ಎಂದು ಹೇಳುತ್ತಿದ್ದರು.

---

ಶ್ರೀರಾಮಕೃಷ್ಣರು ಯಾವ ವೇದವೇದಾಂತವನ್ನೂ ಓದಿದವರಲ್ಲ. ಆದರೆ ಅವರು ಮಾತನಾಡುವುದನ್ನು ಕೇಳುವುದಕ್ಕೆ ದೊಡ್ಡ ದೊಡ್ಡ ವಿದ್ವಾಂಸರು ಬರುತ್ತಿದ್ದರು. ಏಕೆಂದರೆ ಅವರ ಮಾತು ಅನುಭವದಿಂದ ಜಿನುಗಿ ಬಂದದ್ದು. ಆದಕಾರಣವೇ ಅವರ ಮಾತಿನಲ್ಲಿ ಅಂತಹ ಒಂದು ಆಕರ್ಷಣೆ ಇದೆ, ತೇಜಸ್ಸಿದೆ. ಒಂದು ಸಲ ಶಂಭುಮಲ್ಲಿಕ್ ಎಂಬುವವನು ಶ್ರೀರಾಮಕೃಷ್ಣರ ವಿಷಯವಾಗಿ, " ಅವರ ಕೈಯಲ್ಲಿ ಕತ್ತಿ ಇಲ್ಲ, ಗುರಾಣಿ ಇಲ್ಲ – ಆದರೂ ವೀರಸಿಂಗ್" ಎಂದು ಹೇಳುತ್ತಾನೆ. (ಆಧಾರ : ನಗೆಗಾರ ಶ್ರೀರಾಮಕೃಷ್ಣ)

# ಎಂಟು ಸೂತ್ರಗಳಲ್ಲಿ ಶ್ರೀರಾಮಕೃಷ್ಣರ ಉಪದೇಶಗಳು

ಸ್ವಾಮಿ ಹರ್ಷಾನಂದ

ಅತ್ಯಂತ ಗಹನವಾದ ತಾತ್ತ್ವಿಕ ಅಂಶಗಳನ್ನು ಸೂತ್ರಗಳ ರೂಪದಲ್ಲಿ ಸಂಗ್ರಹಿಸುವುದು ಪ್ರಾಚೀನ ಭಾರತೀಯ ಪದ್ಧತಿಯಾಗಿದೆ. ಶ್ರೀರಾಮಕೃಷ್ಣರ ಸಂದೇಶಗಳನ್ನು ಸುಲಭವಾಗಿ ಜ್ಞಾಪಕದಲ್ಲಿ ಇಟ್ಟುಕೊಂಡು, ಮನನ ಮಾಡಲು ಅನುಕೂಲವಾಗುವಂತೆ ಎಂಟು ಸೂತ್ರಗಳಲ್ಲಿ ಸಂಗ್ರಹಿಸಿ ಕೊಟ್ಟಿರುವ ಪರಮಪೂಜ್ಯ ಸ್ವಾಮೀಜಿಯವರು ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರು. ಸಂಸ್ಕೃತ ಮತ್ತು ಶಾಸ್ತ್ರೀಯ ವಿಚಾರಗಳಲ್ಲಿ ಅಗಾಧ ಪಾಂಡಿತ್ಯ ಹೊಂದಿರುವ ಇವರು ಅನೇಕ ಪುಸ್ತಕಗಳನ್ನು ರಚಿಸಿದ್ದಾರೆ ಮತ್ತು ಅನುವಾದಿಸಿದ್ದಾರೆ. ಇವರು ಉತ್ತಮ ವಾಗ್ಮಿಗಳು ಕೂಡ.

ಭಗವಾನ್ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ, ಯಾವಾಗ ಧರ್ಮದ ಅವನತಿಯಾಗುವುದೋ ಆಗ ಧರ್ಮದ ಪುನರ್‌ಸ್ಥಾಪನೆಗಾಗಿ, ಸಾಧುಸಜ್ಜನರ ಸಂರಕ್ಷಣೆಗಾಗಿ, ದುಷ್ಟರ ವಿನಾಶಕ್ಕಾಗಿ, ಪ್ರತಿಯೊಂದು ಯುಗದಲ್ಲಿಯೂ ತಾನು ಅವತರಿಸುವುದಾಗಿ ವಚನ ನೀಡಿದ್ದಾನೆ (ಗೀತಾ, ೪. ೭-೮).

ಶ್ರೀರಾಮಕೃಷ್ಣರ ಅವತಾರದ ವಿಶೇಷತೆ ಏನೆಂದರೆ ಅವರು ಸ್ವತಃ ಧರ್ಮಮಾರ್ಗದಲ್ಲಿ ನಡೆದು, ಧರ್ಮದ ಪುನರುತ್ಥಾನ ಮಾಡಿ, ಇತರರಿಗೆ ಅದನ್ನು ಪ್ರಭಾವಶಾಲಿಯಾಗಿ ಉಪದೇಶಿಸಿದುದು; ದುರ್ಮಾರ್ಗದಲ್ಲಿದ್ದವರನ್ನು ಹಂತಹಂತವಾಗಿ ಧರ್ಮಮಾರ್ಗಕ್ಕೆ ತಂದು, ಆಧ್ಯಾತ್ಮಿಕವಾಗಿ ಅವರನ್ನು ಮೇಲೆತ್ತಿದುದು. ಶ್ರೀರಾಮಕೃಷ್ಣರು ಈ ನವಯುಗದಲ್ಲಿ ತೋರ್ಪಡಿಸಿದ ಹೊಸ ಶಕ್ತಿಗೆ, ನವವಿಧಾನಕ್ಕೆ ಒಳಗಾಗಿ ಪರಿವರ್ತನೆಯಾದವರಲ್ಲಿ ಗಿರೀಶ್ ಚಂದ್ರ ಘೋಷ್, ಕಾಳಿಪಾದ ಘೋಷ್ - ಇವರೇ ಮೊದಲಿಗರು. ಆ ಶಕ್ತಿಯು ಈಗ ಸೂಕ್ಷ್ಮರೂಪದಲ್ಲಿದ್ದರೂ, ಅದ್ಭುತವಾಗಿ ಬೆರಗುಗೊಳಿಸುವ ರೀತಿಯಲ್ಲಿ ಇನ್ನೂ ತನ್ನ ಘನಕಾರ್ಯವನ್ನು ನಡೆಸುತ್ತಲೇ ಇದೆ.

ಶ್ರೀರಾಮಕೃಷ್ಣರು, ತಮ್ಮ ಜೀವನಪರ್ಯಂತ ಭಗವಂತನ ಸಾಕ್ಷಾತ್ಕಾರವೇ ಮಾನವ ಜೀವನದ ಮುಖ್ಯ ಗುರಿಯೆಂದು ಪ್ರಬಲವಾಗಿ ಪ್ರತಿಪಾದಿಸಿದರು. ಹಾಗೆಯೇ ವಿವಿಧ ರೀತಿಯ ಆಧ್ಯಾತ್ಮಿಕ ಸಾಧನಾಪಥಗಳನ್ನು ವ್ಯಕ್ತಿಗಳ ಸ್ವಭಾವಕ್ಕನುಸಾರವಾಗಿ ನಿರೂಪಿಸಿದರು. ಈ ಉಪದೇಶಗಳೆಲ್ಲವೂ 'ಶ್ರೀರಾಮಕೃಷ್ಣ ವಚನವೇದ' ದಲ್ಲಿ ವಿಸ್ತಾರವಾಗಿ ಹರಡಿವೆ. ಅವರ ವಚನಗಳನ್ನು ಸುಲಭವಾಗಿ ನೆನಪಿನಲ್ಲಿ ಇಡಬಹುದಾದ ಎಂಟು ಸೂತ್ರಗಳಲ್ಲಿ ಹೇಳುವ ಪ್ರಯತ್ನವಿದು.

**ಮೊದಲನೆಯ ಸೂತ್ರ**

**ಈಶ್ವರೋಽಸ್ತ್ಯೇವ; ಸ ಏವ ಸತ್ಯಮ್ ॥ ೧ ॥**

**೧. ಭಗವಂತನು ಸತ್ಯವಾಗಿ ಇದ್ದಾನೆ. ಅವನೊಬ್ಬನೇ ಸತ್ಯ.**

ಎಲ್ಲರೂ ಕೇಳುವ ಸಾಮಾನ್ಯ ಪ್ರಶ್ನೆಯೆಂದರೆ "ಭಗವಂತನು ಇದ್ದರೆ ಅವನನ್ನು ನಾವು ಏಕೆ ನೋಡಲಾಗುವುದಿಲ್ಲ?" ಎಂದು. ಇದಕ್ಕೆ ಶ್ರೀರಾಮಕೃಷ್ಣರ ಸರಳ ಉತ್ತರ ಹೀಗಿದೆ: "ನೀವು ನಿಮ್ಮ ಅಜ್ಞಾನದ ಸ್ಥಿತಿಯಲ್ಲಿ ನೋಡಲಾರಿರಿ. ನಕ್ಷತ್ರಗಳು ಸದಾಕಾಲವೂ ಇದ್ದರೂ, ಹಗಲಿನಲ್ಲಿ ನೀವು ನಕ್ಷತ್ರಗಳನ್ನು ಕಾಣಲಾರಿರಿ. ಹಾಗೆಂದಮಾತ್ರಕ್ಕೆ ನಕ್ಷತ್ರಗಳೇ ಇಲ್ಲವೆಂದು ಅರ್ಥವೇ?" ಎಂದು. ಭಗವಂತನು ಸತ್ಯಸ್ವರೂಪ ಮಾತ್ರವಲ್ಲ, ಅಸ್ತಿತ್ವದಲ್ಲಿ ಇರುವ ಏಕಮೇವ ಸತ್ಯವೇ ಅವನು.

ಅಂದರೆ ನಾವು ಜೀವಿಸುತ್ತಿರುವ ಈ ಜಗತ್ತು, ಓಡಾಡಿಕೊಂಡಿರುವ ಜಗತ್ತು, ನಮ್ಮ ಒಡನಾಡಿಯಾಗಿರುವ ಜಗತ್ತು ಮಿಥ್ಯೆಯೇ? ಸತ್ಯವನ್ನು ಎಂದೂ ಬದಲಾವಣೆಯಾಗದ ವಸ್ತುವೆಂದೂ, ತ್ರಿಕಾಲ (ಭೂತ, ವರ್ತಮಾನ ಮತ್ತು ಭವಿಷ್ಯ) ಅಬಾಧಿತವೆಂದೂ ನಿರೂಪಿಸಿದರೆ ಜಗತ್ತು ಮಿಥ್ಯೆಯೇ. ಈ ನಿರೂಪಣೆಗೆ ಹೋಲಿಸಿ ನೋಡಿದಾಗ, ಈ ಜಗತ್ತು ಕ್ಷಣಕ್ಷಣಕ್ಕೂ ಬದಲಾವಣೆಯಾಗುತ್ತಿರುವುದರಿಂದ, ಕ್ಷಣಭಂಗುರವಾಗಿರುವುದರಿಂದ ಮಿಥ್ಯೆಯೇ ಎಂದಾಗುತ್ತದೆ.

"ಓ, ದೇವರೇ! ಹಾಗಾದರೆ ನಾವು ಹೇಗೆ ಬದುಕಬೇಕು? ಯಾವ ರೀತಿ ಬದುಕಬೇಕು?" ಇದಕ್ಕೆ ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: "ಮನೆಯ ಒಡೆಯನ ಹತ್ತಿರ ಕೆಲಸ ಮಾಡುತ್ತಿರುವ ಕೆಲಸಗಾರ್ತಿಯಂತೆ ಜೀವಿಸಿ. ಮನೆಯ ಒಡೆಯನ ಮಕ್ಕಳನ್ನು ಅವಳು ತನ್ನ ಮಕ್ಕಳಂತೆ ಭಾವಿಸಿ ಉಪಚಾರ ಮಾಡಿದರೂ, ಅವಳಿಗೆ ಚೆನ್ನಾಗಿ ಗೊತ್ತು, ಅವು ತನ್ನ ಮಕ್ಕಳಲ್ಲವೆಂದು. ತನ್ನ ಮಕ್ಕಳು ತನ್ನ ಹಳ್ಳಿಯಲ್ಲಿ ಬೆಳೆಯುತ್ತಿರುವುದೂ ಅವಳಿಗೆ ಗೊತ್ತು."

ಶ್ರೀರಾಮಕೃಷ್ಣರು ಕೊಡುವ ಇನ್ನೊಂದು ದೃಷ್ಟಾಂತವೆಂದರೆ, ದೋಣಿಯು ನೀರಿನ ಮೇಲೆ ಇರಬೇಕು, ಆದರೆ ನೀರು ದೋಣಿಯ ಒಳಗಲ್ಲ ಎನ್ನುವುದು. ಆದ್ದರಿಂದ ಈ ಜಗತ್ತಿನಲ್ಲಿ ಅನಾಸಕ್ತಿಯಿಂದ ಜೀವಿಸಿ. ಎಂದಿಗೂ ಜಗತ್ತಿನ ಜೊತೆಗೆ ಮಾತ್ರ ಭಾವಾತ್ಮಕ ನಂಟನ್ನು ಇಟ್ಟುಕೊಳ್ಳಬೇಡಿ. ಲೌಕಿಕತೆ ನಿಮ್ಮನ್ನು ಸೆಳೆಯದಿರಲಿ. ನಿಮ್ಮ ಕರ್ತವ್ಯಗಳನ್ನು ಚೆನ್ನಾಗಿ ನಿರ್ವಹಿಸಿ; ಫಲವನ್ನು ಭಗವಂತನಿಗೆ ಬಿಡಿ.

**ಎರಡನೆಯ ಸೂತ್ರ**

## ತಂ ದ್ರಷ್ಟುಂ ಜ್ಞಾತುಂ ತೇನ ಸಹ ಆಲಾಪಂ ಕರ್ತುಂ ಚ ಸಾಧ್ಯಮ್॥೨॥

**೨. ಅವನನ್ನು ನೋಡಬಹುದು, ಅರಿಯಬಹುದು, ಅವನೊಡನೆ ಮಾತನಾಡಲೂಬಹುದು.**

ಇವು ದೇವಪುರುಷನ ನೇರ ಮಾತುಗಳು.

ಶ್ರೀರಾಮಕೃಷ್ಣರ ಜೀವನವನ್ನು ಅವಲೋಕಿಸಿದರೆ ಅವರು ಸದಾ ಕಾಳೀಮಾತೆಯ ಸಂಪರ್ಕದಲ್ಲಿದ್ದುದು ಗೋಚರವಾಗುತ್ತದೆ.

ನರೇಂದ್ರನು (ಮುಂದೆ ಸ್ವಾಮಿ ವಿವೇಕಾನಂದರು) ಶ್ರೀರಾಮಕೃಷ್ಣರನ್ನು ಕುರಿತು, "ನೀವು ದೇವರನ್ನು ನೋಡಿದ್ದೀರಾ?" ಎಂದು ಪ್ರಶ್ನಿಸಿದಾಗ ಶ್ರೀರಾಮಕೃಷ್ಣರು ಅವನಿಗೆ ಮೇಲ್ಕಂಡಂತೆ ಉತ್ತರ ನೀಡಿದ್ದರು. ಶ್ರೀರಾಮಕೃಷ್ಣರ ಅನುಗ್ರಹದಿಂದ ನರೇಂದ್ರನೂ ಸಹ ದಕ್ಷಿಣೇಶ್ವರದ ಕಾಳೀಮಂದಿರದಲ್ಲಿ ಅಂಥದ್ದೇ ಅನುಭವವನ್ನು ಪಡೆದನು. ಶ್ರೀರಾಮಕೃಷ್ಣರ ಮಾತುಗಳಲ್ಲೇ ನೇರವಾಗಿ ಹೇಳಬಹುದಾದರೆ, "ನಿಜವಾಗಿಯೂ ದೇವರನ್ನು ಕಾಣಲು ಸಾಧ್ಯ. ಪ್ರೀತಿಯ ಹುಡುಗರೇ, ನಾವೆಲ್ಲಾ ಇಲ್ಲಿ ಜೊತೆಯಾಗಿ ಕುಳಿತು ಮಾತನಾಡುತ್ತಿರುವ ಹಾಗೆಯೇ, ಭಗವಂತನನ್ನು ನೋಡಿ ಮಾತನಾಡಬಹುದು. ಸತ್ಯವಾಗಿ ಮತ್ತು ಪ್ರಾಮಾಣಿಕವಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ" (**ಉಪದೇಶಾಮೃತ** – ೯೦೯). ಆದರೆ ಅವರು ಮುಂದೆ ಹೇಳುತ್ತಾರೆ, "ಈ ಭೌತಿಕ ಶರೀರವು ದೈವೀ ಪ್ರೇಮದ ಶರೀರವಾಗಿ ಪರಿವರ್ತನೆಯಾದಾಗ ಮಾತ್ರ ಭಗವಂತನ ದರ್ಶನ ಸಾಧ್ಯ" ಎಂದು (**ಉಪದೇಶಾಮೃತ** – ೯೧೧).

**ಮೂರನೆಯ ಸೂತ್ರ**

## ಈಶ್ವರದರ್ಶನಂ ಸಾಕ್ಷಾತ್ಕಾರಶ್ಚ ಜೀವನಸ್ಯ ಲಕ್ಷ್ಯಮ್ ॥೩॥

**೩. ಈಶ್ವರನನ್ನು ಕಾಣುವುದು, ಅವನನ್ನು ಅನುಭವಕ್ಕೆ ತಂದುಕೊಳ್ಳುವುದು – ಜೀವನದ ಗುರಿಯಾಗಿರಬೇಕು.**

ಕೇನೋಪನಿಷತ್ ಹೇಳುತ್ತದೆ: "ಭಗವಂತನ ಸಾಕ್ಷಾತ್ಕಾರದಿಂದ ಮಾನವಜೀವನ ಸಫಲವಾಗುತ್ತದೆ. ಇಲ್ಲದಿದ್ದರೆ ದೊಡ್ಡ ವಿನಾಶ ಕಾದಿದೆ (೨–೫). ಭಗವಂತನ ಸಾಕ್ಷಾತ್ಕಾರದಿಂದ ಮಾನವನು ಮೃತ್ಯುವನ್ನು ಜಯಿಸಿ ಅಮೃತತ್ವವನ್ನು ಪಡೆಯುತ್ತಾನೆ" (೨–೪). ಹಿಂದೂ ಧರ್ಮಶಾಸ್ತ್ರಗಳು ನಾಲ್ಕು ಪುರುಷಾರ್ಥಗಳನ್ನು ಮಾನವಜೀವನದ ಗುರಿಯೆಂದು ಹೇಳಿವೆಯಾದರೂ, ಕಡೆಯದಾದ ಮೋಕ್ಷವೇ (ಸಂಸಾರದಿಂದ ಬಿಡುಗಡೆ) ಉನ್ನತ ಹಾಗೂ ಅಂತಿಮ ಗುರಿಯಾಗಿರಬೇಕೆಂದು ಶ್ರೀರಾಮಕೃಷ್ಣರು ಒತ್ತಿ ಹೇಳುತ್ತಾರೆ.

ಶ್ರೀರಾಮಕೃಷ್ಣರು ಈ ಅಂಶವನ್ನು ತಿಳಿಸಲು ತಮ್ಮ ಜೀವನವನ್ನೇ ಮುಡಿಪಿಟ್ಟರು. ಅವರು ಯಾವ ಸಂಶಯಕ್ಕೂ ಎಡೆಯಿರದಂತೆ ಹೇಳಿದ್ದಾರೆ: "ಮೊದಲು ದೇವರನ್ನು ಅರಿಯಿರಿ. ನಂತರ ಧನಾರ್ಜನೆಗೆ ಪ್ರಯತ್ನಿಸಿರಿ" (**ಉಪದೇಶಾಮೃತ** – ೬). ಲೌಕಿಕ ಜೀವನದ ಸುಖಸಂಪತ್ತುಗಳಿಗೆ ಅಂಟಿಕೊಂಡಿರುವ ಜನಸಾಮಾನ್ಯರು ಕೇಳಬಹುದು, "ಭಗವಂತನ ಸಾಕ್ಷಾತ್ಕಾರದಿಂದ ನಮಗೆ ಆಗುವ ಲಾಭವೇನು?" ಎಂದು. ಮುಂದಿನ ಸೂತ್ರ ಈ ಪ್ರಶ್ನೆಗೆ ಉತ್ತರಿಸುತ್ತದೆ.

**ನಾಲ್ಕನೆಯ ಸೂತ್ರ**

## ತದ್ದರ್ಶನೇನ ಸಾಕ್ಷಾತ್ಕಾರೇಣ ಚ, ಸರ್ವಂ ಕೃತಂ ಸರ್ವಂ ಪ್ರಾಪ್ತಮ್ ॥೪॥

**೪. ಅವನ ದರ್ಶನದಿಂದ, ಅವನ ಸಾಕ್ಷಾತ್ಕಾರದಿಂದ, ಎಲ್ಲವನ್ನೂ ಸಾಧಿಸಿದಂತಾಗುತ್ತದೆ; ಎಲ್ಲವನ್ನೂ ಗಳಿಸಿದಂತಾಗುತ್ತದೆ.**

ಯಾರು ಬ್ರಹ್ಮವನ್ನು ಅರಿಯುತ್ತಾರೆಯೋ, ಯಾರು ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆಯೋ ಅವರ ಎಲ್ಲ ಕಾಮನೆಗಳೂ ಸಿದ್ಧಿಸುತ್ತವೆ ಎಂದು ತೈತ್ತಿರೀಯ ಉಪನಿಷತ್ ಗಂಭೀರಧ್ವನಿಯಿಂದ ಘೋಷಿಸುತ್ತದೆ (೨.೧). ಏಕೆಂದರೆ ಜಗತ್ತಿನಲ್ಲಿ ಏನೆಲ್ಲಾ ಇದೆಯೋ ಅದೆಲ್ಲವೂ ಬ್ರಹ್ಮವೇ (ಛಾಂದೋಗ್ಯ, ೩.೧೪.೧).

ಇನ್ನೊಂದು ಪ್ರಸಿದ್ಧ ಉಕ್ತಿಯು ಈ ಭಾವನೆಯನ್ನೇ ಮತ್ತಷ್ಟು ಸ್ಫುಟವಾಗಿ ಹೀಗೆ ವಿಶದೀಕರಿಸುತ್ತದೆ. **ತಸ್ಮಿನ್ ತುಷ್ಟೇ ಜಗತ್ ತುಷ್ಟಂ ಪ್ರೀಣಿತೇ ಪ್ರೀಣಿತಂ ಜಗತ್** – ಅವನು ತುಷ್ಟಿಯಾದರೆ ಜಗತ್ತೇ ತುಷ್ಟಿಯಾಗುವುದು. ಆತನು ಪ್ರೀತನಾದರೆ ಇಡೀ ಜಗತ್ತು ಪ್ರೀತವಾಗುವುದು. ಶ್ರೀರಾಮಕೃಷ್ಣರು ಇದರಲ್ಲಿ ಅಡಗಿರುವ ಸತ್ಯಾಂಶವನ್ನು ಒಂದು ಸುಂದರ ಕಥೆಯ ಮೂಲಕ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ತಿಳಿಸುತ್ತಾರೆ: ಇಬ್ಬರು ಗೆಳೆಯರು ಒಂದು ಸೊಂಪಾದ ಮಾವಿನ ತೋಟವನ್ನು ಅಕಸ್ಮಾತ್ ಕಂಡರು. ಇಬ್ಬರೂ ತೋಟದ ಒಳಗೆ

ಹೋದರು. ಒಬ್ಬಾತನು ತೋಟದಲ್ಲಿ ಎಷ್ಟು ಮರಗಳಿವೆ (ಅವುಗಳ ಎಲೆಗಳನ್ನೂ ಕೂಡ) ಎಂದು ಲೆಕ್ಕಾಚಾರ ಮಾಡತೊಡಗಿದನು. ಇನ್ನೊಬ್ಬನಾದರೋ ಆ ತೋಟದ ಮಾಲೀಕನ ಬಳಿಗೆ ಹೋಗಿ ಸವಿನಯದಿಂದ ಅವನ ಸ್ನೇಹವನ್ನು ಸಂಪಾದಿಸಿದನು. ಮಾಲೀಕನು ಮೊದಲು ಅವನಿಗೆ ಸಿಹಿ ಮಾವಿನಹಣ್ಣುಗಳನ್ನು ನೀಡಿದ ಅನಂತರ, ತೋಟದ ಎಲ್ಲ ವಿವರಗಳನ್ನೂ ತಿಳಿಸಿಕೊಟ್ಟನು. ಶ್ರೀರಾಮಕೃಷ್ಣರು ವಿನೋದದಿಂದ ಕೇಳುತ್ತಾರೆ, "ನೀವು ಮಾವಿನಹಣ್ಣನ್ನು ತಿನ್ನುವಿರೋ ಅಥವಾ ಎಲೆಗಳನ್ನು ಎಣಿಸುವಿರೋ?" ಎಂದು. ಆದ್ದರಿಂದ ನಾವು ತೋಟದ ಮಾಲೀಕನನ್ನು ನೋಡುವುದೇ ಉತ್ತಮ, ಅಲ್ಲವೇ?

**ಐದನೆಯ ಸೂತ್ರ**

## ತದರ್ಥಂ ಗುರುಣಾ ಭವಿತವ್ಯಮ್ ॥೫॥

**೫. ಅದಕ್ಕೆ ಗುರುವಿನ ಆವಶ್ಯಕತೆಯಿದೆ.**

ಕಳ್ಳತನ ಮಾಡುವುದಕ್ಕೂ ಒಬ್ಬ ನಿಪುಣ ಕಳ್ಳನ ಮಾರ್ಗದರ್ಶನ ಬೇಕೆಂದು ವಿನೋದವಾಗಿ ಹೇಳುವುದುಂಟು; ಏಕೆಂದರೆ ಕಳ್ಳತನ ಮಾಡಿಯೂ ಸಿಕ್ಕಿ ಬೀಳದ ಹಾಗೆ ಆ ನಿಪುಣನೇ ದಾರಿ ತೋರುತ್ತಾನೆ.

ಕಳ್ಳತನವೆಂಬ ಹೀನಕೃತ್ಯಕ್ಕೂ ಒಬ್ಬ ಮಾರ್ಗದರ್ಶಿ ಬೇಕಾದರೆ, ಆಧ್ಯಾತ್ಮಿಕ ಬೆಳವಣಿಗೆಗೆ, ಅಧ್ಯಾತ್ಮದ ಒಳಹೊರಗುಗಳ ಅರಿವಿಗೆ ಒಬ್ಬ ಮಾರ್ಗದರ್ಶಿ ಬೇಡವೇ? ಗುರುವಿನ ಸಹಾಯ ಬೇಡವೇ?

ಶ್ರೀರಾಮಕೃಷ್ಣರು ಇಬ್ಬರು ರೈತರು ಹಳ್ಳಿಯಿಂದ ಪ್ರಥಮಬಾರಿಗೆ ಕೊಲ್ಕೊತಾ ನಗರವನ್ನು ನೋಡಲು ಹೊರಟ ಕಥೆಯ ಮೂಲಕ ಇದನ್ನು ವಿವರಿಸುತ್ತಾರೆ. ಮೊದಲಿನ ರೈತ ಕೊಂಚ ಅಹಂಕಾರಿ. ತಾನೇ ನಗರವನ್ನು ನೋಡಲು ಹೊರಡುತ್ತಾನೆ. ಅವನ ಸಂಚಾರ ಕೆಲವು ಕೊಳೆಗೇರಿಗಳನ್ನು ನೋಡಿ ಮುಕ್ತಾಯವಾಗುತ್ತದೆ. ಎರಡನೆಯ ರೈತ ಮೊದಲು ತಾನು ಇಳಿದುಕೊಳ್ಳಲು ವಸತಿಯ ವ್ಯವಸ್ಥೆಮಾಡಿಕೊಂಡು, ನಂತರ ಸ್ಥಳೀಯ ಮಾರ್ಗದರ್ಶಿಯೊಡನೆ ನಗರಸಂಚಾರಕ್ಕೆ ಹೊರಟ. ಅವನು ಕೆಲವೇ ಗಂಟೆಗಳಲ್ಲಿ ನಗರದ ಮುಖ್ಯಸ್ಥಳಗಳನ್ನೆಲ್ಲಾ ನೋಡಿ ಬಂದ.

ಶ್ರೀರಾಮಕೃಷ್ಣರು ಕೇಳುತ್ತಾರೆ, "ಒಂದು ಹೊಸ ಸ್ಥಳವನ್ನು ನೋಡಲು ಮಾರ್ಗದರ್ಶಿಯೊಬ್ಬ ಬೇಕಾದರೆ, ನಿಮಗೆ ಗೊತ್ತಿರದ ಅಪರಿಚಿತ ಕ್ಷೇತ್ರಗಳನ್ನು ನೋಡಲು, ಅವುಗಳೆಲ್ಲವನ್ನೂ ತಿಳಿದ ವ್ಯಕ್ತಿಯ ಆವಶ್ಯಕತೆಯಿಲ್ಲವೇ?"

ಇಬ್ಬರು ಗೆಳೆಯರು ಮಾವಿನತೋಟಕ್ಕೆ ಹೋದ ಕಥೆಯಲ್ಲಿ, ಎರಡನೆಯವನು ತೋಟದ ಮಾಲೀಕನನ್ನು ಕಾಣಲು ತೋಟದ ಮಾಲಿಯ ಸಹಾಯ ಪಡೆದ. ಹಾಗೆಯೇ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಆಧ್ಯಾತ್ಮಿಕ ಗುರುವಿನ ಸಹಾಯ ಪಡೆದೇ ಜಗದೀಶನನ್ನು ಕಾಣಬೇಕು.

ಆಧ್ಯಾತ್ಮಿಕ ಸಾಧನೆಗೆ ಹಲವು ಮಾರ್ಗಗಳು ಇವೆಯಾದರೂ, ಶ್ರೀರಾಮಕೃಷ್ಣರು ನಮ್ಮ ಸಾಧನೆಗೆ ಅವಶ್ಯವಾಗಿರುವ ಮತ್ತು ಗುರಿ ಮುಟ್ಟಲು ಸಾಕಾಗುವ ಮೂರು ಮಾರ್ಗಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅವುಗಳ ವಿವರಣೆಯನ್ನು ನೋಡೋಣ.

**ಆರನೆಯ ಸೂತ್ರ**

## ಕಾಮಕಾಂಚನ ತ್ಯಾಗಃ ಪ್ರಧಾನಂ ಸಾಧನಮ್ ॥೬॥

**೬. ಕಾಮಕಾಂಚನ ತ್ಯಾಗವೇ ಪ್ರಧಾನವಾದ ಸಾಧನೆ.**

ನಮ್ಮ ಸಂಸಾರಬಂಧನವು ನಾವು ದೇಹ–ಮನಸ್ಸುಗಳ ಸಂಘಾತಕ್ಕೆ ಅಂಟಿಕೊಂಡಿರುವುದರಿಂದ ಆಗಿದೆ; ನಾವು ಶುದ್ಧ ಚೈತನ್ಯವಾದ ಆತ್ಮವಸ್ತುವೇ ಎಂಬುದನ್ನು ಮರೆತಿರುವುದರಿಂದ ಆಗಿದೆ. ಈ ಆತ್ಮವಸ್ತುವು ದೇಹಮನೋಬುದ್ಧಿಗಳ ಸಂಘಾತಕ್ಕೆ ಅತೀತವಾದುದು. ಇದು ವೇದಾಂತದ ನಿಲುವು.

ಹಿಂದೂಧರ್ಮದ ಎಲ್ಲ ಶಾಸ್ತ್ರಗಳೂ ಇದನ್ನೇ ಹೇಳಿವೆ. ಎಲ್ಲ ದೈವೀಪುರುಷರ ಅಭಿಪ್ರಾಯವೂ ಇದೇ ಆಗಿದೆ. ಉದಾಹರಣೆಗೆ, ಮನಸ್ಸಿನ ವಿಕಾರಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯ ಅಂದರೆ ಅರಿಷಡ್ವರ್ಗಗಳು ಮಾನವ ಕುಲಕ್ಕೆ ಶತ್ರುಗಳು. ಎಲ್ಲ ಆಧ್ಯಾತ್ಮಿಕ ಸಾಧಕರೂ ಇವುಗಳನ್ನು ಪೂರ್ಣವಾಗಿ ತ್ಯಜಿಸಬೇಕೆಂದು ಎಚ್ಚರಿಕೆ ನೀಡುತ್ತಾರೆ. ಕಾಮ ಮತ್ತು ಲೋಭಗಳು ಉಳಿದ ವಿಕಾರಗಳಿಗೆ ಮೂಲವಾದುದರಿಂದ ಶ್ರೀರಾಮಕೃಷ್ಣರು ಇವೆರಡನ್ನೇ ಕೇಂದ್ರವಾಗಿಟ್ಟುಕೊಂಡು ತಮ್ಮ ಉಪದೇಶಗಳನ್ನು ನೀಡಿದ್ದಾರೆ.

ಭಗವಂತ ಮತ್ತು ಧನಲೋಭಗಳು ಒಟ್ಟಿಗೆ ಇರುವುದು ಅಸಾಧ್ಯವಾದುದರಿಂದ, ಭಗವಂತನನ್ನು ಅರಿಯಲು ಅವುಗಳ ತ್ಯಾಗ ಅಗತ್ಯ. ರಾಜಾ ಪರೀಕ್ಷಿತನು ಕಲಿಪುರುಷನಿಗೆ ಬಂಗಾರದಲ್ಲಿ ನೆಲೆಸಲು ವರ ನೀಡಿದ ಕಥೆಯು ಭಾಗವತದಲ್ಲಿ ಪ್ರಸಿದ್ಧವಾಗಿದೆ (ಭಾಗವತ, ೧–೧೭–೩೯). ಹೀಗೆ ಪರೀಕ್ಷಿತನೇ ಶ್ರೀರಾಮಕೃಷ್ಣರ ಅಚ್ಚುಮೆಚ್ಚಿನ ಉಪದೇಶಕ್ಕೆ ಬುನಾದಿ ಹಾಕಿರುವಂತೆ ತೋರುತ್ತದೆ.